# ಸಂಪಾದಕೀಯ

## ಶ್ರೀಮಾತೆಯ ಅಂತರಾಳ

**ಶ್ರೀ**ಮಾತೆಯೆಂದೇ ಪ್ರಸಿದ್ಧರಾಗಿರುವ ಶ್ರೀರಾಮಕೃಷ್ಣ ಪರಮಹಂಸರ ಪತ್ನಿ ಶ್ರೀಶಾರದಾದೇವಿಯ ಜೀವನವು ಅಸಾಮಾನ್ಯತೆಯ ಆಯಾಮಗಳನ್ನು ತನ್ನ ಅಂತರಾಳದಲ್ಲಿ ಹುದುಗಿಸಿಕೊಂಡಿದೆ. ಹೊರನೋಟಕ್ಕೆ ಸಾಮಾನ್ಯವೆಂದೆನಿಸುವ ಅವರ ನೈಜ ಸರಳತೆಯ ಹಿನ್ನೆಲೆಯಲ್ಲಿ ತಾಳ್ಮೆ, ತೃಪ್ತಿಗಳ ಝರಿ ಅವಿರತವಾಗಿ ಹರಿಯುತ್ತಿದ್ದುದು ಕಂಡುಬರುತ್ತದೆ. ಸಂತೃಪ್ತಿಯ ಭಾವವೇ ಅವರು ನಮಗೆ ತೋರಿರುವ ಆದರ್ಶ. ಇಂದಿನ ದಿನಗಳಲ್ಲಿ ಕಂಡುಬರುವ ನಾನಾ ರೀತಿಯ ಆತಂಕಗಳಿಗೆ ಉದ್ವೇಗಗಳಿಗೆ ಅವರ ಜೀವನಶೈಲಿ ಸಮರ್ಪಕವಾದ ಸಮಾಧಾನವನ್ನು ನೀಡಬಲ್ಲದು. ಜೀವನವೆಂಬ ಈ ಪಯಣವು ಅವರಿಗೆ ಭಾರವೆನಿಸಲಿಲ್ಲ, ಬೇಸರ ತರಲಿಲ್ಲ. ಶಾಂತವಾಗಿ, ಸಹಜವಾಗಿ, ಪ್ರೀತಿಯ ಮಧುರತೆಯನ್ನು ಸುರಿಸುತ್ತ ಸಾಗಿದ ಅವರ ಪಥ ಅನುಕರಣೀಯ. ತವಕಗಳ ಅನಿವಾರ್ಯತೆ ಹೆಗಲ ಮೇಲಿನ ಭೂತದಂತೆ ಅವರನ್ನೆಂದೂ ಕಾಡಲಿಲ್ಲ. ಬಯಕೆಗಳನ್ನು ಹಿಡಿದಿಡುವ ಒತ್ತಡಗಳು ಅವರ ಸಹನೆಯನ್ನು ಪರೀಕ್ಷಿಸಿ, ಧೃತಿಗೆಡಿಸಲಿಲ್ಲ. ಸಹಜವಾಗಿ ಉದ್ಭವಿಸುವ ಒರತೆಗಳಂತೆ ಮೌಲ್ಯಗಳ ಸಾಕಾರಮೂರ್ತಿಯಾಗಿದ್ದರೂ ಶ್ರೀಮಾತೆ ಲೋಕಮನ್ನಣೆಗಾಗಿ ಹಾತೊರೆಯಲಿಲ್ಲ. ಅವರ ಜೀವನದ ಹಲವು ಘಟನೆಗಳನ್ನು ಕುರಿತು ಆಲೋಚಿಸುವುದರ ಮೂಲಕ ನಾವು ಜೀವನದ ಗುರಿಯ ಕಡೆಗೆ ಗಮನ ಹರಿಸುವುದು ಅತ್ಯಾವಶ್ಯಕ.



ಇತರರ ಕಷ್ಟಗಳಿಗೆ ಸ್ಪಂದಿಸುವುದು ಶ್ರೀಮಾತೆಯ ಹುಟ್ಟುಗುಣವಾಗಿತ್ತು. ಬಾಲಕಿಯಾಗಿದ್ದಾಗಲೇ ಮನೆಯ ಕೆಲಸಗಳನ್ನು ಮಾಡುತ್ತ ಹಿರಿಯ ಮಗಳ ಸ್ಥಾನದೊಂದಿಗೆ ಮಗನ ಪಾತ್ರವನ್ನೂ ವಹಿಸಿದ್ದರು. ತಾಯಿಗೆ ಆಸರೆಯಾಗಿ, ಬೇಸರವಿಲ್ಲದೆ, ಗೊಣಗಾಟವಿಲ್ಲದೆ, ಹಳ್ಳಿಯ ವಾತಾವರಣದಲ್ಲಿ ಮನೆಕೆಲಸಗಳನ್ನು ಆನಂದದಿಂದ ಅಚ್ಚುಕಟ್ಟಾಗಿ ಮಾಡುತ್ತಿದ್ದರು. ಮುಂದೆ ಪ್ರಸಿದ್ಧರಾದ ಮೇಲೆ ತಾವು ಬಾಲ್ಯಜೀವನದಲ್ಲಿ ಅನುಭವಿಸಿದ ಕಷ್ಟಗಳನ್ನು ಹೇಳಿಕೊಂಡು ಎಂದೂ ಇತರರ ಅನುಕಂಪವನ್ನು ಬಯಸಲಿಲ್ಲ, ಹೊಗಳಿಕೆಯನ್ನೂ ಕೋರಲಿಲ್ಲ. ತಾಯಿಯ ಬಗ್ಗೆ ಹಾಗೂ ತಮ್ಮಂದಿರ ಬಗ್ಗೆ ಅವರಿಗೆ ಅದೆಷ್ಟು ಕಾಳಜಿ ಪ್ರೀತಿ! ಶಾರದೆಯ ಸ್ನೇಹ, ಮಮತೆ, ಸಂಯಮ, ನಮ್ರತೆ ಹಾಗೂ ಮಧುರವಾದ ನಡತೆಯಿಂದ ಕುಟುಂಬದವರಿಗೆ ಬಡತನದ ಕಷ್ಟಜೀವನ ಭಾರವೆನಿಸಲಿಲ್ಲ. ತಾಯಿ ಶ್ಯಾಮಾಸುಂದರೀ ದೇವಿ ಒಮ್ಮೆ ಹೇಳಿದರು, "ಶಾರದೆ, ಮುಂದಿನ ಜನ್ಮಗಳಲ್ಲೂ ನಿನ್ನಂತಹ ಒಬ್ಬ ಮಗಳು ನನಗೆ ಸದಾ ಇರಲಿ ತಾಯಿ!" ಇದನ್ನು ಕೇಳಿ ಶ್ರೀಮಾತೆ ನಕ್ಕಿರಬೇಕು! ಅಂತಹ ಪರಿಸ್ಥಿತಿಗಳಲ್ಲಿ ನಾವೇನಾದರೂ ಇದ್ದಿದ್ದರೆ —'ಮತ್ತೆ ಈ ಸಂಸಾರದ ಕಷ್ಟನಷ್ಟಗಳ ಸುಳಿಯಲ್ಲಿ ಬೀಳಬೇಕೆ!' ಎಂದು ಭಾವಿಸುತ್ತಿದ್ದೆವು. ಸ್ಥಿರ ಸಂಯಮವುಳ್ಳ, ಸ್ವಾರ್ಥದ ಲವಲೇಶವೂ ಇಲ್ಲದ ಕರುಣೆಯೇ ಮೈವೆತ್ತ ಇಂಥ ವ್ಯಕ್ತಿಗಳೇ ಜೀವನವನ್ನು ಭಾರವೆಂದು ತಿರಸ್ಕರಿಸಿದರೆ, ಸಾಮಾನ್ಯರ ಗತಿಯೇನು?

ಮನುಷ್ಯನ ಅಂತಃಸತ್ತ್ವ ಪರೀಕ್ಷೆಗೆ ಒಳಪಡುವುದು ವಿಷಮ ಪರಿಸ್ಥಿತಿಗಳಲ್ಲೇ ಎಂದು ಕೆಲವರು ಭಾವಿಸುತ್ತಾರೆ. ಅಂತಹ ಪರಿಸ್ಥಿತಿಯಲ್ಲಿ ಇದ್ದಿದ್ದರೆ ನಾವೂ ಹಾಗೆಯೇ ನಡೆದುಕೊಳ್ಳುತ್ತಿದ್ದೆವು ಎಂದೂ ಅನಿಸಬಹುದು. ಸಣ್ಣ ಸಣ್ಣ ವಿಷಯಗಳನ್ನೇ ಸಹಿಸಲಾರದೆ ಹಗರಣಗಳನ್ನು ಮಾಡುವ ನಾವು ಪ್ರತಿ ಮುಹೂರ್ತದಲ್ಲೂ ಪರೀಕ್ಷೆಗಳನ್ನು ಎದುರಿಸಬಲ್ಲೆವೆ? ಮತ್ತೆ ಮತ್ತೆ ತೇಯ್ದರೂ ಪರಿಮಳವನ್ನೇ ಸೂಸುವ ಗಂಧದ ಕೊರಡಿನಂತೆ ನಮ್ಮ ಒಳಗೆಲ್ಲ ಮಧುಮಯವಾಗಿದ್ದರೆ, ಮೃದುವಾಗಿದ್ದರೆ, ಸಹನೆಯಿಂದ ತುಂಬಿದ್ದರೆ ಮಾತ್ರ ಇದು ಸಾಧ್ಯವಾದೀತು. ಶ್ರೀಮಾತೆಯನ್ನು ತಿಳಿಯಬೇಕಾದರೆ ಅವರ ಜೀವನದ ಪ್ರತಿಯೊಂದು ಪರಿಸ್ಥಿತಿಯಲ್ಲಿಯೂ ನಮ್ಮನ್ನು ನಾವು ಇರಿಸಿಕೊಂಡು ನೋಡಿಕೊಳ್ಳಬೇಕು. ಸುಭಾಷಿತಗಳಲ್ಲಿ ಪ್ರಸಿದ್ಧವಾದ ಒಂದು ಶ್ಲೋಕವಿದೆ:

**ಉತ್ತಮಃ ಕ್ಲೇಶವಿಕ್ಷೋಭಂ ಕ್ಷಮಃ ಸೋಢುಂ ನ ಹೀತರಃ।**
**ಮಣಿರೇವ ಮಹಾಶಾಣಘರ್ಷಣಂ ನ ತು ಮೃತ್ಕಣಃ ॥**

'ಕಷ್ಟದಿಂದಾಗುವ ಕ್ಷೋಭೆಯನ್ನು ಉತ್ತಮನು ಮಾತ್ರ ಸಹಿಸಿಕೊಳ್ಳಬಲ್ಲನು; ಇತರರು ಹಾಗಿರಲಾರರು. ಸಾಣೆಕಲ್ಲಿನ ಘರ್ಷಣೆಯನ್ನು ರತ್ನವು ಸಹಿಸಿಕೊಳ್ಳಬಲ್ಲುದೇ ಹೊರತು ಮಣ್ಣಿನ ಕಣ ಸಹಿಸಿಕೊಳ್ಳಲಾರದು." ಶ್ರೀಮಾತೆಯ ಜೀವನ ದುದ್ದಕ್ಕೂ ಅವರ ವ್ಯಕ್ತಿತ್ವದ ಘನತೆ ಎದ್ದು ಕಾಣುತ್ತದೆ. ಯಾವುದೋ ಒಂದು ಸಂದರ್ಭದಲ್ಲಿ ವಿಶೇಷತೆಯನ್ನು ಮೆರೆ ಯುವುದು ಸರ್ವೇಸಾಮಾನ್ಯ. ಪ್ರತಿಯೊಂದು ಹಂತದಲ್ಲೂ, ಎಲ್ಲಿ ಮುಟ್ಟಿದರೂ, ಎಲ್ಲಿ ನೋಡಿದರೂ ಶ್ರೀಮಾತೆಯ ವ್ಯಕ್ತಿತ್ವದಲ್ಲಿ ಮೌಲ್ಯಗಳ ಗಟ್ಟಿಗಳೇ ದೊರೆಯುತ್ತವೆ.

ಶ್ರೀಮಾತೆ ತಮ್ಮ ಹದಿನೆಂಟನೆಯ ಹರಯದಲ್ಲಿ ಪತಿಯ ಸೇವೆ ಮಾಡಲು ದಕ್ಷಿಣೇಶ್ವರಕ್ಕೆ ಬಂದರು. ಈ ಪತಿ-ಪತ್ನಿ ಯರಂತಹ ಮತ್ತೊಂದು ನಿದರ್ಶನವನ್ನು ಜಗತ್ತು ಎಂದೂ ಕಂಡಿಲ್ಲ! ಇವರೀರ್ವರ ನಡುವೆ ದೇಹಸಂಬಂಧದ ವಾಸನೆ ಯಿಲ್ಲದ ಶುದ್ಧ ಪ್ರೀತಿಯ ಅವಿರತ ಸ್ಪಂದನವಿತ್ತು. ಸಾಧನೆ ಯಲ್ಲಿ ಮುಳುಗಿದ್ದ ಪತಿಯನ್ನು ಕಂಡು ಈ ಯುವತಿ ಬೆದರ ಲಿಲ್ಲ, ಹಿಂಜರಿಯಲಿಲ್ಲ. ಎಲ್ಲ ರೀತಿಯ ಸಂದರ್ಭಗಳಿಗೂ ಸ್ಪಂದಿಸುವ ಹೃದಯವಿದ್ದ ಶ್ರೀಮಾತೆಗೆ ಶ್ರೀರಾಮಕೃಷ್ಣರನ್ನು ತಿಳಿಯಲು ಬಹಳ ಸಮಯ ಬೇಕಾಗಲಿಲ್ಲ. ಅವರಿಗೆ ಸಹಾಯಕಳಾಗಿ ನಿಂತು ಎಲ್ಲವನ್ನೂ ಅವರಿಗಾಗಿ ತ್ಯಾಗ ಮಾಡಲು ಸಿದ್ಧರಾಗಿಯೇ ಬಂದಿದ್ದರು. ಶ್ರೀರಾಮಕೃಷ್ಣರು ಕೂಡ ತಮ್ಮ ಭಾವನೆಗಳನ್ನು ತಿಳಿಸುತ್ತ ಶಾರದೆಯ ತರಬೇತಿ ಯನ್ನು ಪ್ರಾರಂಭಿಸಿದರು. ಶ್ರೀಮಾತೆ ನಂತರದ ದಿನಗಳಲ್ಲಿ ಭಕ್ತರಿಗೆ ಹೇಳುತ್ತಿದ್ದರು: 'ಭಗವಂತನ ವಿಚಾರವನ್ನು ಬಿಟ್ಟು ಬೇರೆ ಯಾವುದೇ ವಿಷಯವನ್ನೂ ಶ್ರೀರಾಮಕೃಷ್ಣರು ಹೇಳು ತ್ತಿರಲಿಲ್ಲ. ನನಗೆ ಹೇಳುತ್ತಿದ್ದರು, 'ಮನುಷ್ಯನ ದೇಹವೆಂದರೆ ಏನು ಎಂಬುದನ್ನು ನೋಡಿದೆಯಾ? ಈಗಿದೆ, ಈಗಿಲ್ಲ! ಈ ಸಂಸಾರದಲ್ಲಿ ಸಿಲುಕಿ ಎಷ್ಟೊಂದು ಕಷ್ಟ, ದುಃಖಗಳನ್ನು ಅನು ಭವಿಸುತ್ತಾರೆ!.. ಭಗವಂತನೊಬ್ಬನೇ ನಿತ್ಯಸತ್ಯ. ಅವನನ್ನು ಕರೆ ಯಲು ಸಾಧ್ಯವಾದರೆ ಗೆದ್ದಂತೆ. ದೇಹವನ್ನು ಅವಲಂಬಿಸಿದರೆ ಬರೀ ಸಮಸ್ಯೆಗಳೇ'."

ಶ್ರೀರಾಮಕೃಷ್ಣರು ಸದಾ ಈಶ್ವರಮಗ್ನರಾಗಿರುತ್ತಿದ್ದರು. ಅವರು ಈ ಮಾಯೆಯ ಸಂಸಾರದಲ್ಲಿ ಎಚ್ಚರಿಕೆಯಿಂದ ಇರುತ್ತಿದ್ದರು. ಎಲ್ಲರನ್ನೂ ಪ್ರೀತಿಯಿಂದ ಕಾಣುತ್ತಿದ್ದರೂ ಅವರ ಸಮಾಧಿ ದೈವೋನ್ಮಾದದ ಭಾವಗಳು ಪ್ರೇಕ್ಷಕರಲ್ಲಿ ಅಚ್ಚರಿ ಹಾಗೂ ಭಯಭಕ್ತಿಗಳನ್ನು ಜಾಗೃತಗೊಳಿಸುತ್ತಿದ್ದುದರಿಂದ ತಾನೇತಾನಾಗಿ ಒಂದು ರೀತಿಯ ಅಂತರ ಸೃಷ್ಟಿಯಾಗುತ್ತಿತ್ತು. ಶ್ರೀಮಾತೆಯಲ್ಲಿ ಪ್ರಧಾನವಾಗಿದ್ದ ಮಾತೃವಾತ್ಸಲ್ಯ ಈ ಭಯವನ್ನು ದೂರಮಾಡುತ್ತಿತ್ತು. ಯಾವುದೇ ಸಂಕೋಚವಿಲ್ಲದೆ ಶ್ರೀಮಾತೆಯ ಬಳಿಗೆ ಎಲ್ಲ ರೀತಿಯ ಜನರೂ ಬರುತ್ತಿದ್ದರು. ಅವರಿಗೆ ಎಲ್ಲರೂ ಮಕ್ಕಳೇ; ಯಾರೂ ಅವರ ಪ್ರೀತಿಯಿಂದ ವಂಚಿತರಲ್ಲ. ಸದಾಕಾಲ ಭಗವಂತನ ಕುರಿತು ಶ್ರೀರಾಮಕೃಷ್ಣರು ಮಾತನಾಡುತ್ತಿದ್ದರು, ಹಾಡುತ್ತಿದ್ದರು. ಅದನ್ನು ಅವರ ಸುತ್ತಲಿರುತ್ತಿದ್ದ ಭಕ್ತರು ಆನಂದದಿಂದ ಆಸ್ವಾದಿಸುತ್ತಿದ್ದರೆ, ಇತ್ತ ಶ್ರೀಮಾತೆ ಕತ್ತಲೆಯ ಕೋಣೆಯಲ್ಲಿ ಅವರಿಗೆಲ್ಲ ಅಡುಗೆ ಮಾಡಬೇಕಿತ್ತು. ಶ್ರೀರಾಮಕೃಷ್ಣರ ಸೂಕ್ಷ್ಮ ಆರೋಗ್ಯಕ್ಕೆ ತಕ್ಕಂತಹ ಪಥ್ಯವನ್ನು ಮಾಡಬೇಕಿತ್ತು. ಅವರ ವಿವಿಧ ದೈವೀ ಭಾವಗಳನ್ನು ತಿಳಿದು ಅದಕ್ಕೆ ಸರಿಯಾದ ರೀತಿಯಲ್ಲಿ ಸ್ಪಂದಿಸಬೇಕಿತ್ತು! ಇಷ್ಟೆಲ್ಲ ತೊಂದರೆಗಳಿದ್ದರೂ ಶ್ರೀಮಾತೆ ಎಂದೂ ಸಹನೆ ಕಳೆದು ಕೊಳ್ಳಲಿಲ್ಲ, ಬೇಸರವೆಂದು ಗೊಣಗಲಿಲ್ಲ. ಅವರು ಹೇಳು ತ್ತಿದ್ದರು: "ಅಂದಿನ ದಿನಗಳಲ್ಲಿ ನನಗೆ ಅಶಾಂತಿಯೆಂದರೆ ಏನು ಎಂದೇ ಗೊತ್ತಿರಲಿಲ್ಲ.. ಅವರ ಸೇವೆಯನ್ನು ಮಾಡು ವಾಗ ಯಾವುದೂ ಕಷ್ಟವೆನಿಸುತ್ತಿರಲಿಲ್ಲ. ಆನಂದದಲ್ಲಿ ದಿನ ಗಳೆಲ್ಲ ಕಳೆದುಹೋಗುತ್ತಿದ್ದವು."

ಶ್ರೀಮಾತೆ ಆಗೊಮ್ಮೆ ಈಗೊಮ್ಮೆ ತಮ್ಮ ಹಳ್ಳಿಗೆ ಹೋಗಿ ಬರುತ್ತಿದ್ದರು. ಒಮ್ಮೆ ಹಾಗೆ ಹಳ್ಳಿಯಿಂದ ದಕ್ಷಿಣೇಶ್ವರಕ್ಕೆ ತಾಯಿಯೊಡನೆ ಮರಳಿ ಬಂದಾಗ ಎಂತಹ ವ್ಯಕ್ತಿಯೂ ಸಹಿಸ ಲಾರದ ಅವಮಾನಕರ ಘಟನೆಯೊಂದು ನಡೆಯಿತು. ತಾಯಿ ಮತ್ತು ಮಗಳು ಬಹಳ ದೂರದ ಪ್ರಯಾಣದಿಂದ ಬಳಲಿ ಬಂದಿದ್ದರು. ಇಂದಿನ ದಿನಗಳಂತೆ ಆಗ ಸೌಲಭ್ಯಗಳಿರಲಿಲ್ಲ. ಕಾಲ್ನಡಿಗೆಯಲ್ಲೇ ಬರಬೇಕಿತ್ತು. ನೌಕೆಯಲ್ಲಿ ಗಂಗೆಯನ್ನು ದಾಟಿ ಇತ್ತ ಬಂದಿಳಿದೊಡನೆಯೇ ಶ್ರೀರಾಮಕೃಷ್ಣರ ಭಾಗಿನೇಯ ಹೃದಯರಾಮ ಬಾಯಿಗೆ ಬಂದಂತೆ ಬಯ್ಯಲು ಪ್ರಾರಂಭ ಮಾಡಿದ: "ನೀವೇತಕ್ಕೆ ಇಲ್ಲಿಗೆ ಬಂದಿರಿ? ನಿಮ್ಮನ್ನು ಯಾರು ಬರಹೇಳಿದರು?" ಇತ್ಯಾದಿ... ಅವನ ಕೆಟ್ಟ ಬಾಯ ಭಯದಿಂದ ಬಳಿಯಲ್ಲೇ ನಿಂತಿದ್ದರೂ ಶ್ರೀರಾಮಕೃಷ್ಣರು ಮೌನ ವಾಗಿ ಉಳಿದುಬಿಟ್ಟರು. ದಣಿದು ಬಂದ ಪತ್ನಿಗೆ ಹಾಗೂ ವಯಸ್ಸಾದ ಅತ್ತೆಗೆ ಎಂತಹ ಸ್ವಾಗತ! ಆದರೂ ಶ್ರೀಮಾತೆ ಯಾವುದೇ ಪ್ರತಿಕ್ರಿಯೆಯಿಲ್ಲದೆ ಬಂದಿದ್ದ ನೌಕೆಯಲ್ಲೇ ಮತ್ತೆ ಹತ್ತಿ ಕುಳಿತರು. ತಾನು ಅವರ ಪತ್ನಿ, ಅವರ ಜೊತೆಯಿರಲು ತನಗೆ ಸಂಪೂರ್ಣ ಅಧಿಕಾರವಿದೆ ಎಂದು ಜಗಳವಾಡದೆ ಶ್ರೀರಾಮಕೃಷ್ಣರ ಪರಿಸ್ಥಿತಿಯನ್ನೂ ಅರ್ಥಮಾಡಿಕೊಂಡು ಅಸಾಧ್ಯ ಸಂಯಮವನ್ನು ತೋರಿದರು. "ಮತ್ತೆ ನಿನ್ನ ಇಚ್ಛೆಯಿದ್ದು ನೀನೇ ಕರೆಸಿಕೊಂಡರೆ ಹಿಂದಿರುಗುವೆ" ಎಂದು ದೇವಸ್ಥಾನದತ್ತ ತಿರುಗಿ ಜಗನ್ಮಾತೆಯಲ್ಲಿ ಮೂಕ ಪ್ರಾರ್ಥನೆ ಯನ್ನು ಸಲ್ಲಿಸಿ ಹಿಂದಿರುಗಿದರು. ಇಂತಹ ಪರಿಸ್ಥಿತಿಯಲ್ಲೂ ತಾಳ್ಮೆಯನ್ನು ತೋರಿಸಿ, ಕೆಲವು ತಿಂಗಳ ನಂತರ ಪರಮ

ಹಂಸರು ಕರೆಸಿಕೊಂಡಾಗ, ಏನೂ ಆಗಲೇ ಇಲ್ಲವೇನೋ ಎಂಬಂತೆ, ಶ್ರದ್ಧೆಯಿಂದ ಪತಿಯ ಸೇವೆಯನ್ನು ಮುಂದುವರಿಸಿದರು. ಶ್ರೀಮಾತೆಯವರಲ್ಲಿದ್ದ ಪತಿಭಕ್ತಿ ಹಾಗೂ ಮನೋಸ್ಥೈರ್ಯಗಳನ್ನು ಈ ಪ್ರಸಂಗ ತೋರಿಸುತ್ತದೆ.

ಶ್ರೀರಾಮಕೃಷ್ಣರ ಬಗ್ಗೆ ಶ್ರೀಮಾತೆಯವರಿಗಿದ್ದ ಪ್ರೀತಿಯೇ ಈ ಕಷ್ಟಗಳನ್ನು ಸಹಿಸುವ ಶಕ್ತಿಯನ್ನು ನೀಡಿತ್ತು ಎಂದು ನಾವು ಭಾವಿಸಬಹುದು. ಪ್ರೀತಿಯ ಉಲ್ಲಾಸದಲ್ಲಿ ಕಷ್ಟಗಳು ಸಹನೀಯವಾಗುವುದು ಸಹಜವೇ. ಈ ಚಿಂತನೆಯಲ್ಲಿ ಮಾಧುರ್ಯವಿದೆ, ಆದರೆ ವಾಸ್ತವಕ್ಕೆ ಇದನ್ನು ತರುವುದು ಎಷ್ಟು ಕಠಿಣ! ಒಂದಲ್ಲ, ಎರಡಲ್ಲ, ಹದಿನಾಲ್ಕು ವರ್ಷಗಳ ಕಾಲ ಇಂತಹ ಸೇವೆಯನ್ನು ಮಾಡಿದರು ಶ್ರೀಮಾತೆ. ಮರೆಯಲ್ಲಿದ್ದು, ತಮ್ಮ ಸುಖ ಸ್ವಾತಂತ್ರ್ಯಗಳ ಬಗ್ಗೆ ನಿಸ್ಪೃಹರಾಗಿ, ಒಂದಿನಿತೂ ವಿಷಾದವಿಲ್ಲದೆ, ಅದ್ಭುತ ಸಂಯಮ, ಸಹನೆಗಳನ್ನು ಮೆರೆದರು. ಲೌಕಿಕ ಹಾಗೂ ಆಧ್ಯಾತ್ಮಿಕ—ಎರಡೂ ಪಥಗಳನ್ನು ಸಮಶ್ರುತಿಯಲ್ಲಿ ಸಾಧಿಸಿದ ಇವರ ಜೀವನದಲ್ಲಿ ಒಂದು ಆಧಾರಶ್ರುತಿಯಿದೆ. ಇದನ್ನು ಗಮನಿಸಬೇಕು—ಯಾರಿಂದಲೂ ಏನನ್ನೂ ಬಯಸದೇ ಇರುವುದು. ಆದ್ದರಿಂದಲೇ ಅವರ ಮನಸ್ಸು ಸಮಾಧಾನಕ್ಕಾಗಿ ಹೊರಗಿನ ವಸ್ತುಗಳನ್ನಾಗಲಿ, ವ್ಯಕ್ತಿಗಳನ್ನಾಗಲಿ ಅವಲಂಬಿಸಿರಲಿಲ್ಲ. ಇಂತಹದ್ದು ಬೇಕು ಎಂಬ ಹಂಬಲವಿಲ್ಲ, ಇಂತಹವರು ಅಂತಹವರು ಎಂಬ ಭೇದದೃಷ್ಟಿಯೂ ಇಲ್ಲ. ಅವರಿಗೆ ಎಲ್ಲವೂ ಭಗವದರ್ಪಿತವೇ!

ಶ್ರೀರಾಮಕೃಷ್ಣರ ಇಚ್ಛೆಯನುಸಾರವೇ ಎಲ್ಲವೂ ನಡೆಯುತ್ತದೆ ಎಂಬ ದೃಢವಾದ ಸಮರ್ಪಣಾ ಭಾವ ಅವರ ಮನಸ್ಸಿನಲ್ಲಿ ತಳವೂರಿತ್ತು. ಮುಂದೆ ಶ್ರೀಮಾತೆಗಾಗಿ ಒಂದು ಹೊಸ ಮನೆಯನ್ನು ಕಟ್ಟಿಸಿಕೊಟ್ಟು, ಸೌಕರ್ಯಗಳನ್ನು ಒದಗಿಸಿದಾಗಲೂ ಅವರ ನಿಲುವಿನಲ್ಲಿ ಯಾವುದೇ ಪರಿವರ್ತನೆಯಿರಲಿಲ್ಲ. ಅವರು ಅನುಭವಿಸಿದ ಕಷ್ಟಗಳನ್ನು ಕುರಿತು ಯಾರಾದರೂ ಸಂತಾಪ ತೋರಿದರೆ ಹೇಳುತ್ತಿದ್ದರು, "ಸೆಣಬಿನ ನಾರಿನಿಂದ ಮಾಡಿದ ಚಾಪೆಯ ಮೇಲೆ ಮಲಗುತ್ತಿದ್ದೆ. ಅದೇ ಗೋಣಿಯ, ಉಪಯೋಗಕ್ಕೆ ಬಾರದ ಚೂರುಗಳಿಂದ ಮಾಡಿದ ದಿಂಬನ್ನು ತಲೆಯಡಿ ಇಡುತ್ತಿದ್ದೆ. ಹಾಗೆ ಮಲಗಿದಾಗ ಹೇಗೆ ಸುಖವಾಗಿ ನಿದ್ರೆ ಬರುತ್ತಿತ್ತೋ ಅದೇ ರೀತಿಯಲ್ಲಿ ಈ ಮಂಚ, ಹಾಸಿಗೆಯಲ್ಲೂ ಬರುತ್ತದೆ. ಯಾವುದೇ ವ್ಯತ್ಯಾಸ ನನಗೆ ಕಂಡುಬರುತ್ತಿಲ್ಲ." ಮತ್ತೆ ಹೇಳಿದರು: "ನೋಡು, ತೃಪ್ತಿಗೆ ಸಮನಾದ ಸಂಪತ್ತಿಲ್ಲ."

ದಕ್ಷಿಣೇಶ್ವರದ ನಹಬತ್ತಿನಲ್ಲಿ ಜನರ ಕಣ್ಣಿಗೆ ಬೀಳದಂತೆ ಇವರ ಸಾಧನೆ ಮುಂದುವರಿಯುತ್ತಿದ್ದರೆ, ಅತ್ತ ದೇವಸ್ಥಾನದ ಪ್ರಾಂಗಣದಲ್ಲಿ ಅನೇಕ ಭಕ್ತರು ಶ್ರೀರಾಮಕೃಷ್ಣರ ಸಾನ್ನಿಧ್ಯದಿಂದ ಆನಂದವನ್ನು ಅನುಭವಿಸುತ್ತಿದ್ದರು. ಲಜ್ಜೆಯಿಂದ, ಜನರಿರುವಲ್ಲಿಗೆ ಶ್ರೀಮಾತೆ ಹೋಗುತ್ತಿರಲಿಲ್ಲ. ತಮ್ಮ ಕೋಣೆಯ ಸುತ್ತಲೂ ಇದ್ದ ಗೋಣಿಯ ತಾಟಿನ ಪರದೆಯ ಹಿಂದೆ ನಿಂತು ಕೀರ್ತನೆಯನ್ನು ಆಲಿಸುತ್ತಿದ್ದರು. ಅವರೇ ಹೇಳುತ್ತಿದ್ದರು: "ಹಲವಾರು ಗಂಟೆಗಳ ಕಾಲ ಶ್ರೀರಾಮಕೃಷ್ಣರ ಕೀರ್ತನೆಯನ್ನು ಕಿಂಡಿಯ ಮೂಲಕ ನೋಡುತ್ತ ನಿಲ್ಲುತ್ತಿದ್ದೆ. ಅಲ್ಲಿಂದಲೇ ಕೈಮುಗಿದು ನಮಿಸುತ್ತಿದ್ದೆ. ಅದೇನು ಆನಂದವನ್ನು ಅನುಭವಿಸುತ್ತಿದ್ದೆ! ಹಗಲೂ ರಾತ್ರಿ ಜನ ಬಂದು ಭಗವಂತನ ವಿಷಯ ಕೇಳಿಹೋಗುತ್ತಿದ್ದರು. ಕೆಲವೊಮ್ಮೆ ಎರಡು ತಿಂಗಳಲ್ಲಿ ಒಂದು ಸಲ ಶ್ರೀರಾಮಕೃಷ್ಣರನ್ನು ನೋಡುತ್ತಿದ್ದೆ. ನನ್ನ ಮನಸ್ಸಿಗೆ ಹೇಳಿಕೊಳ್ಳುತ್ತಿದ್ದೆ, 'ಮನಸ್ಸೇ ಪ್ರತಿನಿತ್ಯ ಅವರ ದರ್ಶನ ಪಡೆಯಲು ನೀನೇನು ಭಾಗ್ಯವಂತಳೇ?'"

ಯೋಗಿನ್‌ಮಾ, ಗೋಲಾಪ್‌ಮಾ ಮುಂತಾದ ಸ್ತ್ರೀಭಕ್ತರಂತೆ ಶ್ರೀರಾಮಕೃಷ್ಣರ ಕೋಣೆಗೆ ಬೇಕಾದಂತೆ ಹೋಗುವುದು ಶ್ರೀಮಾತೆಗೆ ಸಾಧ್ಯವಿರಲಿಲ್ಲ. ಪತ್ನಿಯೆಂಬ ಮಾತ್ರಕ್ಕೇ ಯಾವಾಗ ಬೇಕಾದರೂ ಹೋಗಿ ಮಾತನಾಡಿಸುವ ಸ್ವಾತಂತ್ರ್ಯವಿಲ್ಲ, ಊಟ ತೆಗೆದುಕೊಂಡು ಹೋಗಿ ಬಡಿಸುವ ಸಮಯವೊಂದನ್ನು ಬಿಟ್ಟರೆ, ಅದೂ ದಿನಕ್ಕೊಂದು ಬಾರಿ ಮಾತ್ರ; ಮತ್ತೊಂದು ಅವಕಾಶವಿರುತ್ತಿರಲಿಲ್ಲ. ಅದನ್ನೂ ಕೂಡ ಬೇರೆಯವರ ಸಂತೋಷಕ್ಕಾಗಿ ಹಲವಾರು ದಿನಗಳ ಕಾಲ ತ್ಯಾಗ ಮಾಡುತ್ತಿದ್ದರು! ಕೊಲ್ಕತಾದಿಂದ ಬರುತ್ತಿದ್ದ ಭಕ್ತಮಹಿಳೆಯರು ಶ್ರೀರಾಮಕೃಷ್ಣರ ಸೇವೆ ಮಾಡುವ ಬಯಕೆಯನ್ನು ವ್ಯಕ್ತಪಡಿಸಿದರೆ ಊಟದ ತಟ್ಟೆಯನ್ನು ಅವರ ಕೈಗೆ ಕೊಟ್ಟುಬಿಡುತ್ತಿದ್ದರು. ಆಕ್ಷೇಪಣೆಯಿಲ್ಲದೆ, ತನ್ನ ಪತಿಯ ಮೇಲೆ ತನಗೆ ಸಂಪೂರ್ಣ ಹಕ್ಕಿದೆ ಎಂಬ ಧೋರಣೆಯಿಲ್ಲದೆ, ಇತರರು ಶ್ರೀರಾಮಕೃಷ್ಣರ ಕೃಪೆಗೆ ಪಾತ್ರರಾಗಲಿ ಎಂದು ತಮ್ಮ ಆಸೆಗಳನ್ನು ಬದಿಗಿಡುತ್ತಿದ್ದರು. ಭಗಿನಿ ನಿವೇದಿತಾ ಒಂದೆಡೆ ಬರೆದಿದ್ದಾಳೆ: "ತನ್ನ ಆರಾಧ್ಯದೇವನಾದ ಪತಿಯ ಬಗ್ಗೆ ಮಾತನಾಡುವಾಗ ಎಂದೂ, ಒಮ್ಮೆಯೂ ಕೂಡ, ವ್ಯಕ್ತಿಗತವಾದ ಸಂಬಂಧದ ಕುರುಹೂ ಅವರ ಮಾತಿನಲ್ಲಿ ಕಾಣಿಸಿಕೊಳ್ಳುತ್ತಿರಲಿಲ್ಲ." ಇದು ಶ್ರೀಮಾತೆಯ ವ್ಯಕ್ತಿತ್ವದ ವೈಶಿಷ್ಟ್ಯ. ಶ್ರೀರಾಮಕೃಷ್ಣರೊಡನೆ ಅವರಿಗಿದ್ದ ವಿಶೇಷ ಸಂಬಂಧವನ್ನಾಗಲಿ, ಉಳಿದ ವ್ಯಕ್ತಿಗಳಿಗಿಂತ ಇವರ ಅಧಿಕಾರ ಹೆಚ್ಚು ಎಂಬ ಭಾವನೆಯನ್ನಾಗಲಿ ಶ್ರೀಮಾತೆಯ ಪರಿಚಯವಿಲ್ಲದವರು ಅವರ ನಡೆನುಡಿಯಿಂದ ಸುಳಿವು ಪಡೆಯುವುದು ಅಸಾಧ್ಯವೇ.

ಸದಾ ಕಿರುಕುಳ ಕೊಡುತ್ತಿದ್ದ ನಾದಿನಿಯರ ಬಗ್ಗೆಯೂ ಶ್ರೀಮಾತೆ ಎಂದೂ ತಿರಸ್ಕಾರ ವ್ಯಕ್ತಪಡಿಸುತ್ತಿರಲಿಲ್ಲ. ರಾಧುವಿನ ಬೀಗರ ಮನೆಗೆ ಉಡುಗೊರೆ ಕಳಿಸುವ ಪ್ರಸಂಗ ಬಂದಾಗ

ನಳಿನಿ ಈರ್ಷ್ಯೆಯಿಂದ ಜಗಳ ಪ್ರಾರಂಭ ಮಾಡುವಳು ಎಂದು ಶ್ರೀಮಾತೆಗೆ ತಿಳಿದಿತ್ತು. ಅವರು ನೇರವಾಗಿ ನಳಿನಿಯ ಬಳಿ ಹೋಗಿ ಕೇಳಿಯೇಬಿಟ್ಟರು, "ನೋಡು, ರಾಧುವಿನ ಬೀಗರಿಗೆ ಏನೇನು ಕಳಿಸಿದರೆ ಉಚಿತವಾದೀತು?" ಈ ಪ್ರಶ್ನೆಯಿಂದ ತಬ್ಬಿಬ್ಬಾಗಿ ನಳಿನಿ ಆಲೋಚಿಸಿ ಹೇಳಿದಳು, "ಅವರೆಲ್ಲ ಎಂತಹವರೇ ಆಗಿದ್ದರೂ ನಿನ್ನ ಸ್ಥಾನಕ್ಕೆ ಸರಿಹೊಂದುವಂತೆ ಒಳ್ಳೆಯ ಪದಾರ್ಥಗಳನ್ನೇ ಕಳಿಸಿಕೊಡುವುದು ಉಚಿತ" ಎಂದು. ರಾಧು ಹಾಗೂ ಅವಳ ಹುಚ್ಚು ತಾಯಿಯ ಬಗ್ಗೆ ತನಗಿದ್ದ ಅಸೂಯೆಯನ್ನು ಮರೆತು ವಿವೇಚನೆಯಿಂದ ನುಡಿದಳು ನಳಿನಿ! ಆಗ ಶ್ರೀಮಾತೆ ಹೇಳಿದರು, "ಆಗೊಮ್ಮೆ, ಈಗೊಮ್ಮೆ ಸ್ವಲ್ಪ ಅಧಿಕಾರ ಕೊಟ್ಟು ನಾವು ಸ್ವಲ್ಪ ತಗ್ಗಿ ನಡೆದರೆ ಹೇಗೆ ಕೆಲಸ ಸಿದ್ಧಿಸುವುದು ನೋಡು!" ಶ್ರೀಮಾತೆಯ ವಿನಯವೂ ಎಷ್ಟು ಸಮಯೋಚಿತವಲ್ಲವೇ!

ಈ ಘಟನೆಗಳ ಕುರಿತು ಓದುಗರೇ ಸ್ವತಂತ್ರವಾಗಿ ಆಲೋಚಿಸಲಿ. ಪರಿಶೀಲನೆಯಿಂದ, ಆತ್ಮಾವಲೋಕನದಿಂದ ಸುಧಾರಿಸಿಕೊಳ್ಳುವ ಪ್ರಯತ್ನ ಮಾಡಿದರೆ ನಮ್ಮಲ್ಲಿಯೂ ಶ್ರೀಮಾತೆಯ ಗುಣಗಳು ವ್ಯಕ್ತವಾಗಲು ಅವಕಾಶ ದೊರೆಯುತ್ತದೆ. ಮೇಲು-ಕೀಳೆಂಬ ಯಾವುದೇ ಭೇದವಿಲ್ಲದೆ ಎಲ್ಲವನ್ನೂ, ಎಲ್ಲರನ್ನೂ ಬಂದಂತೆ ಸ್ವೀಕರಿಸುವ ಸಮದೃಷ್ಟಿ ಶ್ರೀಮಾತೆಗೆ ಲಭಿಸಿತ್ತು. ವ್ಯಕ್ತಿಗಳಿಂದ, ವಸ್ತುಗಳಿಂದ ತನಗೆ ಸುಖವೆಂಬ ಆಶಾಮರೀಚಿಕೆ ಅವರನ್ನು ಭ್ರಮೆಗೊಳಪಡಿಸಲಿಲ್ಲ. ತಮ್ಮ ಅಂತರಾಳದಲ್ಲಿ ಸಂತೃಪ್ತರಾಗಿದ್ದ ಇವರ ಬಳಿಗೆ ನೊಂದವರು ಬಂದು ಸಾಂತ್ವನ ಪಡೆದರು, ಶಾಂತಿಯ ತಂಪನ್ನು ಸವಿದರು. ಇವರ ವಾತ್ಸಲ್ಯದ ಸುಧೆಯಲ್ಲಿ ಮಿಂದು ಪುನಶ್ಚೇತನಗೊಂಡ ಜೀವಿಗಳು ಅದೆಷ್ಟೋ! ಪಾಂಡಿತ್ಯವಿಲ್ಲದೆ, ಹಣದ ಆಮಿಷವಿಲ್ಲದೆ, ಲೌಕಿಕತೆಯ ಲೇಪನವಿಲ್ಲದೆ ಕೇವಲ ಸರಳ, ಮುಗ್ಧ ಒಲುಮೆಯಿಂದ ಎಲ್ಲರನ್ನೂ ತಮ್ಮವರನ್ನಾಗಿಸಿಕೊಂಡ ನಿಜವಾದ ಅರ್ಥದಲ್ಲಿ ಶ್ರೀಮಾತೆ ಎಲ್ಲರ ತಾಯಿ. ತಾಯಿಯ ಗುಣಗಳು ಮಕ್ಕಳಲ್ಲಿಯೂ ವ್ಯಕ್ತವಾಗುವುವು. ಪ್ರಯತ್ನಿಸಿದರೆ ನಮ್ಮ ಪ್ರೀತಿಯ ತಾಯಿಯಂತೆ ನಾವೂ ಆಗಬಹುದು. ಅವರಿಗೆ ನಾವು ಸಲ್ಲಿಸುವ ಶ್ರದ್ಧಾಭಕ್ತಿಗಳನ್ನು ಈ ಮೂಲಕ ಅರ್ಪಿಸಿದರೆ ನಮ್ಮ ಜೀವನ ಮಧುರವಾಗುತ್ತದೆ, ಆನಂದದಾಯಕವಾಗುತ್ತದೆ. ಇದರಲ್ಲಿ ಸಂಶಯವಿಲ್ಲ. ಇದು ನಮಗೆಲ್ಲರಿಗೂ ಬೇಕಾಗಿರುವ ಆದರ್ಶ, ಮಾರ್ಗ. ಮೊದಲ ಹೆಜ್ಜೆ ಇಡುವುದಷ್ಟೇ ನಮ್ಮ ಕೆಲಸ. ಮುನ್ನಡೆಯುವ ಸಾಮರ್ಥ್ಯವನ್ನು ಅವರೇ ಪ್ರೀತಿಯಿಂದ ಕರುಣಿಸುವರು. ✪

### ಆತ್ಮಸಾಕ್ಷಿಯ ನಾಯಕತ್ವ

ಸ್ವಾಮಿ ಶಾರದಾನಂದರ ಕ್ರಿಯಾಶೀಲ ಬದುಕಿನಲ್ಲಿಯ ಯಶಸ್ಸಿನ ಗುಟ್ಟೆಂದರೆ ಅವರ ವಿನೀತ ಭಾವ ಮತ್ತು ಇತರರ ಆತ್ಮಗೌರವದ ಬಗ್ಗೆ ಅವರಿಗಿದ್ದ ಗೌರವ. ೧೯೧೮ರಲ್ಲಿ ಉಮಾನಂದರು ವೃಂದಾವನದಿಂದ ಕಾಗದ ಬರೆದು ತಾವು ಅವರನ್ನು ನೋಡಲು ಕೊಲ್ಕತ್ತಕ್ಕೆ ಬರುತ್ತಿರುವುದಾಗಿ ತಿಳಿಸಿದರು. ಆದರೆ ಈ ಕಾಗದ ಮಠದ ಕಛೇರಿಯಲ್ಲಿ ಹೇಗೋ ಕಳೆದುಹೋಯಿತು. ಉಮಾನಂದರು ಬಂದೊಡನೆಯೇ ಶಾರದಾನಂದರು ಮೊದಲೇ ಬರೆಯದೆ ಕೇಂದ್ರವನ್ನು ಬಿಟ್ಟುಬಂದುದಕ್ಕಾಗಿ ಕಿರಿಯ ಸಂನ್ಯಾಸಿಯನ್ನು ತರಾಟೆಗೆ ತೆಗೆದುಕೊಂಡರು; ತಾವು ಮೊದಲೇ ಬರೆದು ಬಂದಿರುವುದಾಗಿ ಉಮಾನಂದರು ಹೇಳಿದರೂ ಸ್ವಾಮಿಗಳು ನಂಬಲಿಲ್ಲ. ಅನಂತರ, ಶಾರದಾ ನಂದರಿಗೆ ಆ ಕಾಗದವು ಸಿಕ್ಕಿತು; ತಕ್ಷಣವೇ ಅವರು ಕಣ್ಣೀರಿಟ್ಟುಕೊಂಡು ಪಶ್ಚಾತ್ತಾಪಪಟ್ಟರು. ಅಧ್ಯಕ್ಷರಾದ ಸ್ವಾಮಿ ಬ್ರಹ್ಮಾನಂದರ ಬಳಿಗೆ ಹೋಗಿ ತಮ್ಮನ್ನು ಸಂಘದ ಕಾರ್ಯದರ್ಶಿ ಸ್ಥಾನದಿಂದ ಬಿಡುಗಡೆ ಮಾಡಬೇಕೆಂಬ ಪ್ರಾರ್ಥನೆಯನ್ನು ಮುಂದಿಟ್ಟರು. ಇಡೀ ಘಟನೆಯನ್ನು ಅವರಿಗೆ ಹೇಳಿ "ಅವನ ನಿಲುವು ಸರಿಯಾಗಿತ್ತು; ಅನ್ಯಾಯವಾಗಿ ಅವನನ್ನು ಬೈದೆ. ಅವನನ್ನು ಕರೆಕಳುಹಿಸಿ ನಾನು ಅವರ ಕ್ಷಮಾಪಣೆ ಕೇಳಬೇಕು" ಎಂದು ಗೋಳಿಟ್ಟರು. ಅಷ್ಟು ದೂರ ಹೋಗುವ ಅಗತ್ಯವಿಲ್ಲ ಎಂದು ಬ್ರಹ್ಮಾನಂದರು ಹೇಳಿದರೂ, ಉಮಾನಂದರಲ್ಲಿ ಹೋಗಿ ತಮ್ಮ ತಪ್ಪನ್ನು ಒಪ್ಪಿಕೊಂಡು ಆ ಕಿರಿಯನ ಕ್ಷಮಾಪಣೆ ಬೇಡುವವರೆಗೂ ಶಾರದಾನಂದರು ಬಿಡಲಿಲ್ಲ.



ಸ್ವಾಮಿ ಶಾರದಾನಂದ